
ಎನ್. ಜಗನ್ನಾಥ ಪ್ರಕಾಶ್

# ಜನ ಮೆಚ್ಚುಗೆಯ ನಾಟಕಕಾರ

# ಪರ್ವತವಾಣಿ

ಶಾಲಾ ಕಾಲೇಜು ವಾರ್ಷಿಕೋತ್ಸವಗಳಿಂದ ಹಿಡಿದು ಹವ್ಯಾಸಿ ರಂಗ ತಂಡಗಳಿಗೂ ಇಷ್ಟವಾಗುವಂತೆ ನಾಟಕಗಳನ್ನು ರಚಿಸಿ ಮೆಚ್ಚುಗೆ ಗಳಿಸಿದ ಪರ್ವತವಾಣಿ ನಟನೆ–ನಿರ್ದೇಶನದಲ್ಲೂ ನೈಪುಣ್ಯತೆ ಸಾಧಿಸಿದ್ದ ಪ್ರತಿಭಾವಂತರು. ವಿಲಾಸಿ ನಾಟಕ ರಂಗವನ್ನು ಸಮರ್ಥವಾಗಿ ಮುನ್ನೆಡೆಸಿದವರಲ್ಲಿ ಪರ್ವತವಾಣಿ ಪ್ರಮುಖರು. ಅವರು ಹೆಚ್ಚು ಒತ್ತು ಕೊಟ್ಟಿದ್ದು ಸಮಕಾಲೀನ ಆಗು ಹೋಗುಗಳಿಗೆ. ವೃತ್ತಿ ನಾಟಕ ಸಂಸ್ಥೆಗಳು ಹೊಸ ನಾಟಕಗಳ ಹುಡುಕಾಟದಲ್ಲಿದ್ದಾಗ ಇವರ ಹೊಸ ಬಗೆಯ 83ಕ್ಕೂ ಹೆಚ್ಚು ನಾಟಕಗಳು ಖ್ಯಾತಿ ಪಡೆದವು.

ಓದುವ ಸಂದರ್ಭದಲ್ಲಿ ವೃತ್ತಿ ಹಾಗೂ ಹವ್ಯಾಸಿ ರಂಗನಾಟಕಗಳನ್ನು ವೀಕ್ಷಿಸಿ ಖುಷಿ ಪಡುತ್ತಿದ್ದ ಪರ್ವತವಾಣಿ ರಂಗಪ್ರವೇಶ ಮಾಡಿದ್ದು ನಟರಾಗಿ. ಭದ್ರಾವತಿಯಲ್ಲಿ ಅರಣ್ಯ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದ ಅವರು 'ಕೃಷ್ಣ ಪಾರಿಜಾತ'ವನ್ನು ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕಲಾಸಕ್ತರು ಅಭಿನಯಿಸಲು ನಿರ್ಧರಿಸಿದಾಗ ನಿರ್ವಹಿಸಿದ್ದು ಶ್ರೀಕೃಷ್ಣನ ಪಾತ್ರವನ್ನು.



ಹವ್ಯಾಸಿ ರಂಗದ ಕಡೆಗೆ ಹೆಚ್ಚಿನ ಒಲವಿದ್ದ ಪರ್ವತವಾಣಿ ಕೈಲಾಸಂ ಅವರ 'ಬಂಡ್ವಾಳವಿಲ್ಲದ ಬಡಾಯಿ', ಎ.ಎನ್. ಮೂರ್ತಿ ರಾವ್ ಅವರ 'ಆಷಾಢಭೂತಿ' ನಾಟಕಗಳಲ್ಲಿ ಅಭಿನಯಿಸಿದರು. ಹವ್ಯಾಸಿಗಳಿಗೆ ಹೆಚ್ಚಿನ ಸಂಪನ್ಮೂಲಗಳಿಲ್ಲದ ದಿನಗಳವು. ರಂಗ ಸಜ್ಜಿಕೆ, ಸಂಗೀತ, ವಸ್ತ್ರಾಲಂಕಾರಗಳಿಗೂ ಆರ್ಥಿಕ ಚೈತನ್ಯ ಇಲ್ಲದಿದ್ದ ಆ ಕಾಲದಲ್ಲಿ ಮಾತುಗಳೇ ಕ್ರಿಯೆಯಾಗುವಂತೆ ಸಂಭಾಷಣೆ ಬರೆದು ನಾಟಕಗಳನ್ನು ಸಿದ್ಧಪಡಿಸಿದರು. ಪ್ರೇಕ್ಷಕರಿಗೆ ಸಶಕ್ತ ಮಾತುಗಳ ಮೂಲಕ ಉದ್ದೇಶವನ್ನು ತಲುಪಿಸುವ ಸೂಕ್ಷ್ಮ ಕೆಲಸದಲ್ಲಿ ಯಶಸ್ವಿಯಾದರು.